ಎಂ ವಿ ಸಿ **ನಂ. 729/24**

**ಪಿ ಡಬ್ಲ್ಯೂಃ 1**

**ದಿಃ 10-02-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರಿ ಎ ಎಸ್ ಎಸ್ ವಕೀಲರಿಂದಃ**

ಅಪಘಾತವು ದಿನಾಂಕ 07.08.2024 ರಂದು ಆಗಿರುತ್ತದೆ. ಸದರಿ ದಿನ ನಾವು ಮೋಟರ ಸೈಕಲ ಮೇಲೆ ಕಲಘಟಗಿಯಿಂದ ಧಾರವಾಡಕ್ಕೆ ಹೋಗುತ್ತಿದ್ದೆವು. ನಾನು ಹೋಗುತ್ತಿದ್ದ ಮೋಟರ ಸೈಕಲನ್ನು ನನ್ನ ಪರಿಚಯಸ್ಥ ಮಂಜುನಾಥ ಧಾರವಾಡ ಇವರು ಚಲಾಯಿಸುತ್ತಿದ್ದು ನಾನು ಹಿಂಬದಿ ಸವಾರಳಾಗಿದ್ದೆ. ಅಪಘಾತವಾದ ಸ್ಥಳದಲ್ಲಿ ರಸ್ತೆ ನೇರವಾಗಿ ಇದೆ ಅಂದರೆ ನಿಜ. ರಸ್ತೆ ಅಗಲ ಸುಮಾರು 24 ಅಡಿ ಇರುತ್ತದೆ ಅಂದರೆ ನಿಜ. ಸದರಿ ರಸ್ತೆ ಮೇಲೆ ಎರಡು ಭಾರಿ ವಾಹನಗಳು ಸರಾಗವಾಗಿ ಸಾಗುತ್ತವೆ ಅಂದರೆ ನಿಜ. ಲಾರಿ ನಂ ಎಂ ಎಚ್ 11/ಎ ಬಿ 4272 ನೇದ್ದರ ಚಾಲಕ ರಸ್ತೆ ಎಡಬದಿಗೆ ತನ್ನ ವಾಹನವನ್ನು ತೆಗೆದುಕೊಂಡು ಹೋಗುತ್ತಿದ್ದ ಅಂದರೆ ನಿಜ. ನಾನು ಹೋಗುತ್ತಿದ್ದ ಮೋಟರ ವಾಹನ ಸವಾರ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಲಾರಿಗೆ ಡಿಕ್ಕಿ ಪಡಿಸಿರುತ್ತಾನೆ ಅಂದರೆ ಸರಿಯಲ್ಲ. ಅಪಘಾತವಾದ ನಂತರ ಮೋಟರ ಸೈಕಲನ್ನು ಪೋಲೀಸರು ಠಾಣೆಗೆ ತೆಗೆದುಕೊಂಡು ಹೋಗಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಅಪಘಾತವಾದ ಎರಡು ದಿನಗಳ ನಂತರ ನಾನು ಲಾರಿ ಮಾಲೀಕನೋಂದಿಗೆ ಶಾಮಿಲಾಗಿ ಲಾರಿ ಚಾಲಕನ ವಿರುದ್ಧ ಸುಳ್ಳು ದೂರು ಸಲಿಲಸಿದ್ದೇನೆ ಅಂದರೆ ಸರಿಯಲ್ಲ. ಅಪಘಾತದ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಲಾರಿ ಚಾಲಕನ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಅಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ನಿರ್ಲಕ್ಷತನದಿಂದ ಆಗಿಲ್ಲ ಅಂದರೆ ಸರಿಯಲ್ಲ. ನಾವು ಎಲ್ಲರೂ ಮಿಲಾಪಿಯಾಗಿ ಪ್ರಕರಣ ದಾಖಲಿಸಿರುವುದರಿಂದ 2 ನೇ ಎದುರುದಾರ ಪರಿಹಾರ ನೀಡಲು ಬಾಧ್ಯಸ್ಥನಲ್ಲ ಅಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಲಾರಿ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎನ್ನುವದು ನನಗೆ ಗೊತ್ತಿಲ್ಲ.

ಅಪಘಾತದಲ್ಲಿ ನನನ್ನ ಬಲಗೈ, ಬಲಗಾಲು, ತಲೆಗೆ ತೀವ್ರ ತರಹದ ಗಾಯಗಳಾಗಿದ್ದು ಮೊದಲು ಕಲಘಟಗಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು ನಂತರ ಸುಚಿರಾಯ ಆಸ್ಪತ್ರೆಗೆ ದಾಖಲಾಗಿದ್ದು ನಂತರ ಧಾರವಾಡದ ಎಸ್ ಡಿ ಎಂ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಅಪಘಾತವು ಬೆಳಿಗ್ಗೆ 9-00 ಗಂಟೆಗೆ ಆಗಿರುತ್ತದೆ. ನನಗೆ ಚಿಕಿತ್ಸೆ ನೀಡಿದ ಎಸ್ ಡಿ ಎಂ ಆಸ್ಪತ್ರೆಯವರಿಗೆ ದಾಖಲೆ ನೀಡಲು ಯಾವುದೆ ತೊಂದರೆ ಇಲ್ಲ. ಎಸ್ ಡಿ ಎಂ ಆಸ್ಪತ್ರೆಯ ವೈದ್ಯರಿಂದ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದುಕೊಳ್ಳಲು ಯಾವುದೆ ತೊಂದರೆ ಇಲ್ಲ. ಅಪಘಾತದಲ್ಲಿ ನನಗೆ ಯಾವುದೆ ಅಂಗನ್ಯೂನ್ಯತೆ ಉಂಟಾಗಿಲ್ಲ ಆದ್ದರಿಂದ ಯಾವುದೆ ಪ್ರಮಾಣ ಪತ್ರ ಹಾಜರ ಪಡಿಸಿಲ್ಲ ಅಂದರೆ ಸಾಕ್ಷಿ ನಾನು ಕೇಳಿಲ್ಲ ಆದ್ದರಿಂದ ಕೊಟ್ಟಿಲ್ಲ ಅನ್ನುತ್ತಾರೆ.

ನನಗೆ ಯಾವುದೆ ಅಂಗನ್ಯೂನ್ಯತೆ ಉಂಟಾಗಿಲ್ಲ ಅಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಕೂಡಾ ಕೆಲಸ ಮಾಡುತ್ತೇನೆ ಅಂದರೆ ಸರಿಯಲ್ಲ. ಅಪಘಾತವಾದ ನಂತರ 2 ತಿಂಗಳವರೆಗೆ ಚಿಕಿತ್ಸೆ ಪಡೆದುಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸಾಕ್ಷಿ ಹೆಚ್ಚಿನ ಅವಧಿಗೆ ಚಿಕಿತ್ಸೆ ಪಡೆದಿದ್ದೇನೆ ಅನ್ನುತ್ತಾರೆ. ಚಿಕಿತ್ಸೆ ಸಲುವಾಗಿ ಸುಮಾರು 5 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-10 ರ ಕ್ರಮ ಸಂಖ್ಯೆ 2, 36 ರಲ್ಲಿ ನಾನು ಔಷದಿಗಳನ್ನು ಖರೀದಿಸಿದ ನಂತರ ಬಾಕಿ ಉಳಿದ ಮೊತ್ತವನ್ನು ನನಗೆ ಮರಳಿಸಿದ್ದಾರೆ ಅಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ದಾಖಲಿಸುವಾಗ ಮುಂಗಡ ಹಣ ಪಡೆದುಕೊಂಡಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ನಿಪಿ-10 ರ ಕ್ರಮ ಸಂಖ್ಯೆ 46, 48, 50 ರಲ್ಲಿ ಮುಂಗಡ ಹಣ ಪಾವತಿ ಮಾಡಿದ ಬಗ್ಗೆ ದಾಖಲೆ ಅಂದರೆ ನಿಜ. ಬಿಡುಗಡೆ ಆಗುವ ಸಮಯದಲ್ಲಿ ನೀಡಿದ ಕೊನೆಯ ಬಿಲ್ಲಿನಲ್ಲಿ ಮುಂಗಡ ಹಣವನ್ನು ಕಡಿತಗೋಳಿಸಿದ್ದಾರೆ ಅಂದರೆ ನಿಜ. ಕ್ರಮ ಸಂಖ್ಯೆ 58 ರಂತೆ ಬಾಕಿ ಮೊತ್ತವನ್ನು ನನ್ನ ಪೋನ ಪೇ ಮೂಲಕ ಹಣ ಮರಳಿಸಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ, ಸುಚಿರಾಯ ಆಸ್ಪತ್ರೆಯಲ್ಲಿ ಬೆಳಿಗ್ಗೆ 10-00 ಗಂಟೆಗೆ ದಾಖಲಾಗಿದ್ದು ಪ್ರಥಮ ಚಿಕಿತ್ಸೆ ಆದ ನಂತರ ಮಧ್ಯಾಹ್ನ 1-00 ಗಂಟೆ ವರೆಗೆ ಚಿಕಿತ್ಸೆ ಪಡೆದುಕೊಂಡು ನಂತರ ಅಲ್ಲಿಂದ ಎಸ್ ಡಿ ಎಂ ಆಸ್ಪತ್ರೆಗೆ ದಾಖಲಾಗಿದ್ದೆನೆ. ಆ ಸಮಯದಲ್ಲಿ ನನಗೆ ಸ್ಕ್ಯಾನಿಂಗ್ ಮಾಡಿ ಪ್ರಥಮ ಚಿಕಿತ್ಸೆ ನೀಡಿದ್ದಾರೆ. ನಾನು ಹೆಚ್ಚಿನಪರಿಹಾರ ಪಡೆದುಕೊಳ್ಳುವ ಸಲುವಾಗಿ ನಿಪಿ-10 ರಲ್ಲಿಯ ಕ್ರಮ ಸಂಖ್ಯೆ 53 ರಿಂದ 63 ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ಕ್ರಮ ಸಂಖ್ಯೆ 62 ಮತ್ತು 63 ರ ದಾಖಲೆ ಒಂದೆ ಇರುತ್ತದೆ ಅಂದರೆ ನಿಜ. ನಾನು ಹೆಚ್ಚುವರಿ ಪರಿಹಾರ ಪಡೆದುಕೊಳ್ಳಲು ಖೊಟ್ಟಿ ದಾಖಲೆಗಳನ್ನು ಹಾಜರ ಪಡಿಸಿದ್ದೇನೆ ಅಂದರೆ ಸರಿಯಲ್ಲ.

ನಾನು ಈಗ ಯಾವುದೆ ಕೆಲಸ ಮಾಡುತ್ತಿಲ್ಲ. ಅಪಘಾತಕ್ಕಿಂತ ಮುಂಚೆ ಶ್ರೀರಾಮ ಪೈನಾನ್ಸನಲ್ಲಿ ಲೀಗಲ್ ಎಗ್ಜಿಕ್ಯೂಟೀವ್ ಎಂದು ಕೆಲಸ ಮಾಡುತ್ತಿದ್ದೆ. ಈ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ನಾನು ಯಾವುದೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ 30 ಸಾವಿರ ಸಂಬಳ ಇತ್ತು ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ಈ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ಪ್ರತಿ ತಿಂಗಳ ಸಂಬಳವನ್ನು ಬ್ಯಾಂಕಿಗೆ ಹಾಕುತ್ತಿದ್ದರು, ಬ್ಯಾಂಕ ದಾಖಲೆ ಹಾಜರ ಪಡಿಸಲು ತೊಂದರೆ ಇಲ್ಲ. ನಿಪಿ-8 ನ್ನು ಖೊಟ್ಟಿಯಾಗಿ ಸೃಷ್ಟಿಸಿ ಹಾಜರ ಪಡಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಈಗಲೂ ಕೂಡಾ ಕೆಲಸ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತವಾದ ನಂತರ ನನಗೆ 3-4 ತಿಂಗಳಲ್ಲಿ ಹಾಜರಾಗುವಂತೆ ತಿಳಿಸಿದ್ದು ನಾನು ಹಾಜರಾಗದೆ ಇದ್ದುದರಿಂದ ಸೇವೆಗೆ ರಾಜಿನಾಮೆ

ಎಂ ವಿ ಸಿ **ನಂ. 729/24**
**ಪಿ ಡಬ್ಲ್ಯೂಃ 1**

ಕೊಟ್ಟಿರುತ್ತೇನೆ. ಕಂಪನಿಯವರು ನನಗೆ ಕೆಲಸ ಮಾಡಲು ಬರಬೇಡ ಎಂದು ಹೇಳಿಲ್ಲ ಆದರೆ ನನಗೆ ಹೋಗಲು ಆಗುವುದಿಲ್ಲ. ಅಪಘಾತವು ಮೋಟರ ಸೈಕಲ ಸವಾವರನ ತಪ್ಪಿನಿಂದ ಆಗಿರುವುದರಿಂದ 2ನೇ ಎದುರುದಾರ ಕಂಪನಿಯವರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ. ಪೋಲೀಸರೊಂದಿಗೆ ಶಾಮಿಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**